ಒ ಎಸ್ 20/2022 ಡಿ.ಡಬ್ಲ್ಯೂ:1

ಇಂದು ದಿಃ 18.12.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

1ನೇ ವಾದಿ ನನ್ನ ಸ್ವಂತ ತಮ್ಮ . 2ನೇ ವಾದಿ ನನ್ನ ತಾಯಿ. 3 ರಿಂದ 7ನೇ ವಾದಿಗಳು ನನ್ನ ಸಹೋದರಿಯರು. ಮುಂಟಿಸಿದ್ದೇಗೌಡ ನನ್ನ ತಂದೆ. ದಾವಾ ಆಸ್ತಿ ಸ.ನಂ 87, ನನ್ನ ತಂದೆ ಸುಮಾರು 50 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ನಾನು 5ನೇ ತರಗತಿಯವರೆಗೆ ಓದಿರುತ್ತೇನೆ. ವಾದಿಗಳು ದಾವೆಯನ್ನು ಯಾಕೆ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಇರುವ ಅಂಶಗಳು ನನಗೆ ಗೊತ್ತು. ವಾದಿಗಳು ದಾವಾ ಆಸ್ತಿ ವಿಭಾಗವನ್ನು ಕೇಳಿ ದಾವಾ ಸಲ್ಲಿಸಿದ್ದಾರೆ ಎಂದರೆ ಸುಳ್ಳು. ವಾದಿಗಳು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ನಾನು ನೋಡೀರುತ್ತೇನೆ. ನಿಪಿ 11 ರಲ್ಲಿ ಸಿದ್ದಯ್ಯ ಬಿನ್ ಮುಂಟಿಸಿದ್ದೇಗೌಡ ಎಂದರೆ ನನ್ನ ತಂದೆ. ನಿಪಿ .16ರ ವರದಿಯನ್ನು ಎ.ಡಿ.ಎಲ್.ಆರ್ ರವರು ಸ್ಥಳ ಪರಿಶೀಲನೆ ಮಾಡಿ ತಹಸಿಲ್ದಾರರಿಗೆ ಸಲ್ಲಿಸಿದ್ದಾರೆ ಎಂದರೆ ಸುಳ್ಳು. ನಿಪಿ .16 ರಲ್ಲಿ ಸಿದ್ದಯ್ಯ ಅಲಿಯಾಸ್ ಮುಂಟಿಸಿದ್ದೇಗೌಡ ಎಂದು ಇದೆ. ನಿಪಿ.16 ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ 17 ರಂತೆ ಸಲ್ಲಿಸಿರುವ ದಾಖಲೆ ಸಹ ಸುಳ್ಳು. ನಿಡಿ .3ರ ಲ್ಲಿ ತಹಸಿಲ್ದಾರರು ಮಾಡಿರುವ ಎಲ್ ಎನ್ ಡಿ 74/98-99 ರ ನಮೂದು ಇದೆ ಎಂದರೆ ಸರಿ. ನಿಪಿ 13 ರಂತೆ ತಹಸಿಲ್ದಾರರು ದಿ. 18.07.2011 ರಂದ ಆದೇಶ ಹೊರಡಿಸಿ ಅದರಂತೆ ಎಲ್ ಎನ್ ಡಿ 74/98-99 ರ ನಮೂದು ಇದೆ ಎಂದರೆ ಸರಿ. ನಿಪಿ .13 ಅಕ್ರಮ ಸಕ್ರಮ ಕುರಿತಂತೆ ಮಾಡಿರುವ ಅಧಿಕೃತ ಜ್ಞಾಪನ ಎಂದರೆ ಸುಳ್ಳು. ಈ ವಿಚಾರ ನನಗೆ ಅಧಿಕೃತವಾಗಿ ಗೊತ್ತಿದ್ದರೂ ಸಹ ವಾದಿಗಳಿಗೆ ವಿಬಾಗ ಕೊಡಬಾರದು ಎಂದು ತಹಸಿಲ್ದಾರರು ಆದೇಶ ಸುಳ್ಳು ಎಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ಆದೇಶದಲ್ಲಿ ತಹಸಿಲ್ದಾರರು ದಾವಾ ಆಸ್ತಿಯ 11 ಎಕರೆ 28 ಗುಂಟೆ ಜಮೀನನು ನನ್ನ ಹೆಸರಿಗೆ ಬಗರುಕೂಂ ಜಮೀನು ಎಂದು ಆದೇಶ ಮಾಡಿದ್ದಾರೆ ಎಂದರೆ ಸುಳ್ಳು.

ಸಿದ್ದಯ್ಯ ಮೃತಪಟ್ಟ ನಂತರ ಚಿಕ್ಕಯ್ಯನಭತ್ರು ಉಪ ತಹಸಿಲ್ದಾದರರು ನಿಪಿ.13ರ ಆದೇಶದ ಪೂರ್ವದಲ್ಲಿ ನಿಪಿ 18 ರಂತೆ ಆದೇಶ ಕೊಟ್ಟಿದ್ದಾರೆ ಎಂದರೆ ಸುಳ್ಳು. ಅಂದರೆ ನನ್ನ ಪ್ರಕಾರ ತಹಸಿಲ್ದಾರರು ನನ್ನ ಹೆಸರಿಗೆ ನಿಪಿ .13 ರಂತೆ ಮಾಡಿರುವ ಜ್ಞಾಪನ ತಪ್ಪು ಎಂದು ಹೇಳುತ್ತೇನೆ. ನಿಪಿ .19 ರ ವರದಿಯೂ ಸಹ ಸುಳ್ಳು. ನಾನು ಆ ರೀತಿ ಯಾವ ಅರ್ಜಿಯನ್ನು ತಹಸಿಲ್ದಾರರಿಗೆ ಕೊಟ್ಟಿಲ್ಲ.  ನಿಪಿ.13 ರಂತೆ ನನ್ನ ಹೆಸರಿಗೆ ಆಗಿರುವ ನಮೂದನ್ನು ರದ್ದು ಮಾಡಲು ನನ್ನಿಂದ ಅಭ್ಯಂತರ ಇಲ್ಲ. ನಾನು ಹಾಜರು ಮಾಡಿರುವ ದಿನಾಂಕ 03.11.2006 ರ ಪತ್ರ ವಿಭಾಗ ಪತ್ರ ಎಂದರೆ ಸರಿ. ಆ ವಿಭಾಗ ಪತ್ರದಂತೆ ವಾದಿಗಳು ಮತ್ತು ಅವರ ತಂದೆ ಒಂದು ಪಕ್ಷಕಾರರಾಗಿ ಮತ್ತು ನಾನೊಬ್ಬನೆ  ಪಕ್ಕಕಾರನಾಗಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ವಿಭಾಗ ಪತ್ರದತೆ ಎ ಹಿಸ್ಸೆಯನ್ನು ನನ್ನ ತಂದೆ ತಾಯಿ ವಾದಿಗಳು ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಬಿ ಹಿಸ್ಸೆಯಲ್ಲಿ 95/1ಬಿ ರಲ್ಲಿ ನನಗೆ ಪ್ರತ್ಯೇಕವಾಗಿ 35 ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿ. ವಿಭಾಗ ಪತ್ರವಾದ ನಂತರ ನಾನು ಮತ್ತು ಸಿದ್ದೇಗೌಡ ಪ್ರತ್ಯೇಕ ವಾಸವಿದ್ದೇವೆ ಎಂದರೆ ಸರಿ. ವಿಭಾಗ ಪತ್ರದಂತೆ ಇನ್ನು ಮುಂದಕ್ಕೆ ರಕ್ತ ಸಂಬಂಧ ಹೊರತಾಗಿ ಆಸ್ತಿಗಳಿಗೆ ನಮ್ಮ ನಡುವೆ ಯಾವ ಸಂಬಂಧ ಇಲ್ಲ ಎಂದು ಬರೆದುಕೊಂಡಿದ್ದೇವೆ ಎಂದರೆ ಸರಿ. ವಿಭಾಗ ಪತ್ರವಾದ ನಂತರ 2009 ರವೆರಗೆ ಸಿದ್ದಯ್ಯ ವಾದಿಗಳ ಜೊತೆಗೆ ವಾಸವಿದ್ದಾರೆ ಎಂದರೆ ಸರಿ. ನಮ್ಮ ತಂದೆ 11.08.2009 ರಂದು ಮೃತಪಟ್ಟಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟಂತ ನನ್ನ ತಂದೆ ಅಕ್ರಮ ಸಕ್ರಮ ಆಸ್ತಿಯ್ನು ಸಕ್ರಮ ಮಾಡಲು ನನ್ನ ತಂದೆ ಕೊಟ್ಟ ಅರ್ಜಿಯು 2009 ರವರೆಗೆ ಇತ್ಯರ್ಥವಾಗಿಲ್ಲ ಎಂದರೆ ಅರ್ಜಿ ಸಲ್ಲಿಸಿದ್ದು ನನಗೆ ಗೊತ್ತಿಲ್ಲ. ತಹಸಿಲ್ದಾರರು ನನ್ನ ತಂದೆ  ಕೊಟ್ಟ ಅರ್ಜಿಯನ್ನು ಆಧರಿಸಿ ಎಲ್ ಎನ್ ಡಿ 74/98-99 ಎಂದು ಪ್ರಕ್ರಿಯಯನ್ನು ಪ್ರಾರಂಬಿಸಿದ್ದಾರೆ ಎಂದರೆ ಸುಳ್ಳು. ಬಗರು ಉಕುಂ ಆಸ್ತಿಯು ಇತ್ಯರ್ಥವಾಗದ ಕಾರಣ ನಿಡಿ.5 ರಲ್ಲಿ ದಾವಾ ಆಸ್ತಿಯನ್ನು ಆ ಸಮಯದಲ್ಲಿ ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಸುಳ್ಳು. ತಹಸಿಲ್ದಾದರರು ನಿಪಿ 13 ರ ಆದೇಶ ಮಾಡುವ ಸಮಯದಲ್ಲಿ ವಾದಿಗಳು ಇದ್ದಾರೆ ಎಂಬದನ್ನು ಮರೆಮಾಚಿ ನನ್ನ ಹೆಸರಿಗೆ ಸುಳ್ಳಾಗಿ ಸಾಗುವಳಿ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸುಳ್ಳು. ನಿಡಿ.4 ರ ತಹಸಿಲ್ದಾದರರ ಆದೇಶವನ್ನು ನಾನೇ ನ್ಯಾಯಾಲಯಕ್ಕೆ  ಹಾಜರು ಮಾಡಿರುತ್ತೇನೆ. ಸದರಿ ಆದೇಶದಲ್ಲಿ ಇರುವ ಎಲ್ಲಾಅಂಶಗಳು ನನಗೆ ಗೊತ್ತು. ನಿಡಿ.4 ರ ಆದೇಶದಲ್ಲಿ ವಾದಿಗಳ ಒಪ್ಪಿಗೆ ಪತ್ರವನ್ನು ಪಡೆದುಕೊಂಡಿಲ್ಲ ಎಂದು ಸ್ಪಷ್ಟವಾಗಿ ನಮೂದು ಇದೆ ಎಂದರೆ ಸುಳ್ಳು. ನಾನು ಹಾಜರು ಮಾಡಿರುವ ದಾಖಲೆಗಳ ವಿವರಗಳನ್ನು ಅರ್ಥಯಿಸಿಕೊಂಡು ಸಲ್ಲಿಸಿದ್ದೇನೆ ಎಂದರೆ ಸರಿ. ವಾದಿಗಳು ದಾವಾ ಆಸ್ತಿಗೆ ಸಂಬಂಧಪಟ್ಟತೆ ಸಲ್ಲಿಸಿರುವ ವಿಭಾಗ ದಾವೆಯನ್ನು ಡಿಕ್ರಿ ಮಾಡಲು ನನ್ನಿಂದ ಅಭ್ಯಂತರ ಇಲ್ಲ ಎಂದರೆ

ಆ ಸ್ವಾಮಿ  ನಾನು ಮಾಡಿದ್ದೇನೆ. ನನ್ನ ಹೆಸರಿಗೆ ದಾವಾ ಆಸ್ತಿಯು ಬಗರ್ಹುಕುಂ  ಅಕ್ರಮ ಸಕ್ರಮ ವಾಗಿ ಮಂಜೂರರಾಗಿರವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಿಪಿ .13 ರ ಆದೇಶ ನನ್ನ ಹೆಸರಿಗೆ ಸಂಬಂಧಪಟ್ಟಿದ್ದು. ನಿಪಿ .13ರ ಆದೇಶದಂತೆ ನನ್ನ ಹೆಸರಿಗೆ ದಾವಾ ಆಸ್ತಿ ಖಾತೆ ಆಗಿದೆ ಎಂದರೆ ಅದು ತಪ್ಪಾಗಿದೆ . ಬಗರ್ ಉಕುಂ ಆಸ್ತಿಯನ್ನು ತಹಸಿಲ್ದಾರರು ನನ್ನ ಹೆಸರಿಗೆ ಅಕ್ರಮ ಸಕ್ರಮವಾಗಿ ಮಾಡಿದ್ದಾರೆ ಎನ್ನುವುದುಕ್ಕೆ ದಾಖಲೆ ಹಾಜರು ಮಾಡಲು ತೊಂದರೆ ಇಲ್ಲ . ನನ್ನ ತಂದೆ  ಬಗರ್ ಉಕುಂ ಆಸ್ತಿಯ ವಂಜೂರಾತಿಯ ಆದೇಶ ಆಧಾರದಲ್ಲಿ ಅವರ  ಹೆಸರಿನಲ್ಲಿ ಮಂಜೂರಾಗಬೇಕಿದ ಆಸ್ತಿಯನ್ನು ನನ್ನ ತಂದೆ ಮೃತಪಟ್ಟ ನಂತರ ನನ್ನ ಹೆಸರಿಗೆ ಮಾಡಿದ್ದಾರೆ ಎಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.